**ಒ.ಎಸ್ ನಂ. 4291/ 2017**

ಡಿ.ಡಬ್ಲ್ಯೂ-1

ದಿನಾಂಕಃ24-11-2021 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮಧ್ಯಂತರ ಅರ್ಜಿ ಆದೇಶದ ಮೇರೆಗೆ ಮುಂದುವರಿದ ಮುಖ್ಯ ವಿಚಾರಣೆಃ ಪ್ರತಿವಾದಿ ಪರ ವಕೀಲರಿಂದಃ**

ದಿ.06-07-1969 ರಂದು 4 ನೇ ಪ್ರತಿವಾದಿಯ ತಂದೆ ಸ್ವತ್ತನ್ನು ಖರೀದಿ ಮಾಡಿದ್ದ ಸಂಬಂಧ ಕ್ರಯಪತ್ರದ ದೃಡೀಕೃತ ನಕಲನ್ನು ಹಾಜರುಪಡಿಸಿರುತ್ತೇನೆ. ಮೂಲ ದಾಖಲೆ 4 ನೇ ಪ್ರತಿವಾದಿಯ ಬಳಿ ಇರುತ್ತದೆ. ಹಾಗಾಗಿ ದೃಡೀಕೃತ ನಕಲನ್ನು ನಿಡಿ.19 ಎಂದು ಗುರುತಿಸಲಾಯಿತು. 4 ನೇ ಪ್ರತಿವಾದಿಯ ತಂದೆ ಎ ವಿ ರಾಜುವರ ಮರಣ ಸಮರ್ತನ ಪತ್ರ ಹಾಜರುಪಡಿಸಿರುತ್ತೇನೆ. ಅದನ್ನು ನಿಡಿ. 20 ಎಂದು ಗುರುತಿಸಲಾಯಿತು. 4 ನೇ ಪ್ರತಿವಾದಿ 5 ನೆ ಪ್ರತಿವಾದಿಗೆ ದಿ. 21-01-2013 ರಂದು ಬರೆದುಕೊಟ್ಟ ದಾನಪತ್ರದ ದೃಡೀಕೃತ ನಕಲನ್ನು ಹಾಜರುಪಡಿಸಿರುತ್ತೇನೆ. ಅದನ್ನು ನಿಡಿ. 21 ಎಂದು ಗುರುತಿಸಲಾಯಿತು. 4 ನೇ ಪ್ರತಿವಾದಿ ದಿ.01-12-2014 ರಂದು 3 ನೇ ಪ್ರತಿವಾದಿಗೆ ಬರೆದುಕೊಟ್ಟ ನೊಂದಾಯಿತ ಕ್ರಯದ ಕರಾರುಪತ್ರದ ದೃಡೀಕೃತ ನಕಲನ್ನು ಹಾಜರುಪಡಿಸಿರುತ್ತೇನೆ. ಅದನ್ನು ನಿಡಿ.22 ಎಂದು ಗುರುತಿಸಲಾಯಿತು. ದಿ.17-03-2015 ರಂದು 4 ನೇ ಪ್ರತಿವಾದಿ 5 ನೇ ಪ್ರತಿವಾದಿಗೆ ಬರೆದುಕೊಟ್ಟ ನೊಂದಾಯಿತ ತಿದ್ದುಪಡಿ ಪತ್ರದ ದೃಡೀಕೃತ ನಕಲನ್ನು ಹಾಜರುಪಡಿಸಿರುತ್ತೇನೆ. ಅದನ್ನು ನಿಡಿ. 23 ಎಂದು ಗುರುತಿಸಲಾಯಿತು. ದಿ.17-03-2015 ರಂದು 3 ನೇ ಪ್ರತಿವಾದಿ ಬರೆದುಕೊಟ್ಟ ನೊಂದಾಯಿತ ಕರಾರು ರದ್ದತಿಪತ್ರದ ದೃಡೀಕೃತ ನಕಲನ್ನು ಹಾಜರುಪಡಿಸಿರುತ್ತೇನೆ. ಅದನ್ನು ನಿಡಿ. 24 ಎಂದು ಗುರುತಿಸಲಾಯಿತು. ದಿ.17-03-2015 ರಂದು 4 ನೇ ಪ್ರತಿವಾದಿ 3 ನೇ ಪ್ರತಿವಾದಿಗೆ ಬರೆದುಕೊಟ್ಟ ನೊಂದಾಯಿತ ಕ್ರಯಪತ್ರದ ದೃಡೀಕೃತ ನಕಲನ್ನು ಹಾಜರುಪಡಿಸಿರುತ್ತೇನೆ. ಅದನ್ನು ನಿಡಿ. 25 ಎಂದು ಗುರುತಿಸಲಾಯಿತು. 06-10-2015 ರಂದು ಪ್ರತಿವಾದಿ 4 ರಿಂದ 8 ರವರು 2 ನೇ ಪ್ರತಿವಾದಿಗೆ ಬರೆದುಕೊಟ್ಟ ನೊಂದಾಯಿತ ಒಪ್ಪಿಗೆಪತ್ರದ ದೃಡೀಕೃತ ನಕಲನ್ನು ಹಾಜರುಪಡಿಸಿರುತ್ತೇನೆ. ಅದನ್ನು ನಿಡಿ. 26 ಎಂದು ಗುರುತಿಸಲಾಯಿತು. ದಿ.15-03-2016 ರಂದು 3 ನೇ ಪ್ರತಿವಾದಿ 1 ನೇ ಪ್ರತಿವಾದಿಗೆ ಬರೆದುಕೊಟ್ಟ ಕ್ರಯಪತ್ರದ ದೃಡೀಕೃತ ನಕಲನ್ನು ಹಾಜರುಪಡಿಸಿರುತ್ತೇನೆ. ಮೂಲ

ದಾಖಲೆ ಮತ್ತೊಂದು ಸಿವಿಲ್ ಪ್ರಕರಣದಲ್ಲಿ ಹಾಜರುಪಡಿಸಿರುತ್ತೇನೆ. ಮೂಲ ದಾಖಲೆ ಹಾಜರುಪಡಿಸುವ ಶರತ್ತಿನೊಂದಿಗೆ ಅದನ್ನು ನಿಡಿ. 27 ಎಂದು ಗುರುತಿಸಲಾಯಿತು. 1 ನೇ ಪ್ರತಿವಾದಿ ರಿಪ್ಕೊ ಹೋಂ ಪೈನಾನ್ಸ್ ಕಂಪನಿಗೆ ಸಾಲದ ಹಣಕ್ಕಾಗಿ ಬರೆದುಕೊಟ್ಟ ನೊಂದಾಯಿತ ಅಡಮಾನಪತ್ರದ ದೃಡೀಕೃತ ನಕಲನ್ನು ಹಾಜರುಪಡಿಸಿರುತ್ತೇನೆ. ಅದನ್ನು ನಿಡಿ.28 ಎಂದು ಗುರುತಿಸಲಾಯಿತು. 2 ಋಣಭಾರಪತ್ರಗಳನ್ನು ಹಾಜರುಪಡಿಸಿರುತ್ತೇನೆ. ಅದನ್ನು ನಿಡಿ.29 ಮತ್ತು ನಿಡಿ.30 ಎಂದು ಗುರುತಿಸಲಾಯಿತು. 2 ವಿದ್ಯುತ್ ಚಕ್ತಿ ಬಿಲ್ಲುಗಳನ್ನು ಹಾಜರುಪಡಿಸಿರುತ್ತೇನೆ. ಅವುಗಳ ರಸೀದಿ ಹಾಜರುಪಡಿಸದೇ ಇರುವ ಕಾರಣ ತಕರಾರಿಗೆ ಒಳಪಡಿಸಿ ಅದನ್ನು ಒಟ್ಟಾಗಿ ನಿಡಿ.31 ಎಂದು ಗುರುತಿಸಲಾಯಿತು. ಕಂದಾಯ ಕಟ್ಟಿರವ 5 ರಸೀದಿಗಳನ್ನು ಹಾಜರುಪಡಿಸಿರುತ್ತೇನೆ. ಅದನ್ನು ಕ್ರಮವಾಗಿ ನಿಡಿ.32 ರಿಂದ ನಿಡಿ.36 ಎಂದು ಗುರುತಿಸಲಾಯಿತು. 6 ಭಾವಚಿತ್ರಗಳನ್ನು ಹಾಜರುಪಡಿಸಿರುತ್ತೇನೆ. ಅವುಗಳನ್ನು ಒಟ್ಟಾಗಿ ನಿಡಿ.37 ಎಂದು ಗುರುತಿಸಲಾಯಿತು. 2 ಸಿಡಿಗಳನ್ನು ಹಾಜರುಪಡಿಸಿರುತ್ತೇನೆ. ಅವುಗಳನ್ನು ಕ್ರಮವಾಗಿ ನಿಡಿ. 38 ಮತ್ತು ನಿಡಿ.39 ಎಂದು ಗುರುತಿಸಲಾಯಿತು.

**ಪಾಟೀ ಸವಾಲನ್ನು ಕೋರಿಕೆ ಮೇರೆಗೆ ಮುಂದೂಡಲಾಗಿದೆ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

(ಇಶ್ರತ್ ಜಹಾನ್ ಆರಾ)

**III ನೇ ಎ.ಸಿ.ಸಿ & ಎಸ್.ಜೆ, ಬೆಂಗಳೂರು.**